# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

## ಕೇಂದ್ರ ಕಛೇರಿ : ಬೆಂಗಳೂರು-27.

ಸಂ/ಕರಾಸಾ/ಕೇಕ/ಸಂ/ಸಾ/ಇ-1/3915/2015-16 ದಿನಾಂಕ:24/09/2015

**ಸುತ್ತೋಲೆ ಸಂಖ್ಯೆ: 1307**

ವಿಷಯ: ಇ.ಟಿ.ಎಂ ಯಂತ್ರಗಳು ಕಳೆದುಹೋದಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾರ್ಗದರ್ಶನ.
ಉಲ್ಲೇಖ: ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 546/2004
( No. KST/CO/TR/GEN/4177/2004-05 Dated: 6/9/2004)

***********

ಕ.ರಾ.ರ.ಸಾ ನಿಗಮವು ಟಿಕೇಟ್ ವಿತರಣೆಯಲ್ಲಿ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಇ.ಟಿ.ಎಂ (Electronic Ticketing Machine) ಮೂಲಕ ಟಿಕೇಟುಗಳನ್ನು ವಿತರಿಸುವ ವ್ಯವಸ್ಥೆ ಜಾರಿಗೆ ತಂದಿರುತ್ತದೆ. ಕ.ರಾ.ರ.ಸಾ.ನಿಗಮದಲ್ಲಿ ಇ.ಟಿ.ಎಂ ಅಳವಡಿಕೆ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 546/2004 ರಲ್ಲಿ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಇ.ಟಿ.ಎಂ ಕಳೆದು ಹೋಗಿ ಪುನಃ ದೊರಕಿದ ಪಕ್ಷದಲ್ಲಿ ಮತ್ತು ಅಪಘಾತದಲ್ಲಿ ಇ.ಟಿ.ಎಂ ಯಂತ್ರಗಳು ಜಖಂ ಆಗಿ, ಸಾರಿಗೆ ಆದಾಯ ನಷ್ಟ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸ್ಪಷ್ಟ ನಿರ್ದೇಶನವಿರುವುದಿಲ್ಲ. ಆದುದರಿಂದ ಈ ಬಗ್ಗೆ ಈ ಕೆಳಕಂಡ ಸೂಚನೆಗಳನ್ನು ನೀಡಲಾಗಿದೆ.

1. ನಿರ್ವಾಹಕರ ಬಳಿ ಇದ್ದ ಇ.ಟಿ.ಎಂ ಯಂತ್ರವು ಕಳೆದುಹೋದ ಪಕ್ಷದಲ್ಲಿ ಇಲಾಖಾ ವಿಚಾರಣೆಯನ್ನೊಳಗೊಂಡಂತೆ ಇ.ಟಿ.ಎಂ ಕಳೆದುಹೋಗಿರುವ ಬಗ್ಗೆ ನಿರ್ವಾಹಕರು /ಚಾಲಕ ಕಂ ನಿರ್ವಾಹಕರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವುದು. ನಿರ್ವಾಹಕರು /ಚಾಲಕ ಕಂ ನಿರ್ವಾಹಕರು ಇ.ಟಿ.ಎಂ ಕಳೆದಕೊಂಡಿರುವ ಬಗ್ಗೆ ಲಿಖಿತ ಹೇಳಿಕೆ, ಪೊಲೀಸ್ ಠಾಣೆಗೆ ನೀಡಿದ ದೂರಿನ ಪ್ರತಿ ಹಾಗೂ ಪೊಲೀಸ್ ಠಾಣೆಯ ಸ್ವೀಕೃತಿಯ ಪ್ರತಿಯನ್ನು ಘಟಕ ವ್ಯವಸ್ಥಾಪಕರಿಗೆ ಸಲ್ಲಿಸುವುದು.
2. ಇ.ಟಿ.ಎಂ ಕಳೆದು ಹೋದ ಬಗ್ಗೆ ವಿವರಣೆಯನ್ನು ನೀಡುವಂತೆ ನಿರ್ವಾಹಕ/ಚಾಲಕ ಕಂ ನಿರ್ವಾಹಕರಿಗೆ ಗರಿಷ್ಠ ಒಂದು ವಾರ ಅವಕಾಶ ನೀಡುವುದು. ನಂತರ ಘಟಕ ವ್ಯವಸ್ಥಾಪಕರು, ನಿರ್ವಾಹಕರು /ಚಾಲಕ ಕಂ ನಿರ್ವಾಹಕರು ಇ.ಟಿ.ಎಂ ಕಳೆದುಕೊಂಡ ಸಂದರ್ಭದಲ್ಲಿ ನಿರ್ವಹಿಸಿದ ಮಾರ್ಗದ ಕಳೆದ 30 ದಿವಸಗಳ ಅವಧಿಯಲ್ಲಿ ಇ.ಟಿ.ಎಂ ಮುಖಾಂತರ ಮತ್ತು ಮ್ಯಾನ್ಯುಯಲ್ ಟಿಕೇಟುಗಳನ್ನು ವಿತರಿಸಿದ್ದರೆ ಸದರಿ ಸಾರಿಗೆ ಆದಾಯ ಸಹ ಒಳಗೊಂಡಂತೆ ಗಳಿಸಿದ ದಿನದ ಗರಿಷ್ಠ ಸಾರಿಗೆ ಆದಾಯ ಮತ್ತು ಇ.ಟಿ.ಎಂ ಯಂತ್ರದ ಬೆಲೆಯನ್ನು ನಿರ್ವಾಹಕರಿಂದ ಘಟಕದಲ್ಲಿ ಪಾವತಿಸಿಕೊಂಡು ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ನಿಯಮಾನುಸಾರ ಮುಂದಿನ ಕ್ರಮಕ್ಕಾಗಿ ಸೂಕ್ತ ವರದಿ ಸಲ್ಲಿಸುವುದು.
3. ಕಳೆದುಹೋದ ಇ.ಟಿ.ಎಂ ಯಂತ್ರವು ಪತ್ತೆಯಾದಲ್ಲಿ ಹಾಗೂ ಈಗಾಗಲೇ ಮುರಿದುಕೊಂಡಿದ್ದ ಹಣವನ್ನು ಹಿಂತಿರುಗಿಸುವಂತೆ ನಿರ್ವಾಹಕರು /ಚಾಲಕ ಕಂ ನಿರ್ವಾಹಕರು ಮನವಿ ಸಲ್ಲಿಸಿದಲ್ಲಿ ಸದರಿ ಇ.ಟಿ.ಎಂ ಯಂತ್ರವು ಸುಸ್ಥಿತಿಯಲ್ಲಿರುವ (Hardware & Software) ಬಗ್ಗೆ ಗಣಕ ಅಧೀಕ್ಷಕರಿಂದ ಘಟಕ ವ್ಯವಸ್ಥಾಪಕರು ಲಿಖಿತದಲ್ಲಿ ಖಾತ್ರಿ ಪಡಿಸಿಕೊಳ್ಳುವುದು. ಸದರಿ ಸುಸ್ಥಿತಿಯಲ್ಲಿರುವ ಇ.ಟಿ.ಎಂ ಯಂತ್ರದಿಂದ ಸಾರಿಗೆ ಆದಾಯದ (Collection report to be generated) ಮಾಹಿತಿ ಪಡೆದು ಲೆಕ್ಕಪತ್ರ ಮೇಲ್ವಿಚಾರಕರು/ಅಧೀಕ್ಷಕರಿಂದ ದೃಢೀಕರಿಸಿಕೊಳ್ಳುವುದು. ಘಟಕ ವ್ಯವಸ್ಥಾಪಕರು ನಿರ್ವಾಹಕರಿಗೆ ಮರುಪಾವತಿಸಬೇಕಾದ ವ್ಯತ್ಯಾಸ ಮೊತ್ತದ ಬಗ್ಗೆ ಸೂಕ್ತ ದಾಖಲಾತಿಗಳೊಂದಿಗೆ ವರದಿಯನ್ನು ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಸಲ್ಲಿಸುವುದು.
4. ವಿಭಾಗೀಯ ನಿಯಂತ್ರಣಾಧಿಕಾರಿಗಳು ಸದರಿ ಪ್ರಕರಣದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಮರುಪಾವತಿಸಬೇಕಾದ ಒಟ್ಟು ಮೊತ್ತ ನಮೂದಿಸಿ ತಮ್ಮ ಸ್ಪಷ್ಟ ಶಿಫಾರಸ್ಸಿನೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಪ್ರಧಾನ ವ್ಯವಸ್ಥಾಪಕರು(ಸಂ)/ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ), ಕೇಂದ್ರ ಕಛೇರಿ ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸುವುದು.

   i. ಇ.ಟಿ.ಎಂ ಕಳೆದುಹೋಗಿರುವ ಬಗ್ಗೆ ನಿರ್ವಾಹಕರು /ಚಾಲಕ ಕಂ ನಿರ್ವಾಹಕರು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುವ ಬಗ್ಗೆ ದೂರಿನ ಪ್ರತಿ ಮತ್ತು ಸ್ವೀಕೃತಿ ಪ್ರತಿ.
   ii. ಇ.ಟಿ.ಎಂ ಕಳೆದುಹೋಗಿರುವ ಬಗ್ಗೆ ಘಟಕದಲ್ಲಿ ನಿರ್ವಾಹಕರು /ಚಾಲಕ ಕಂ ನಿರ್ವಾಹಕರು ನೀಡಿರುವ ಲಿಖಿತ ಹೇಳಿಕೆ ಪ್ರತಿ.
   iii. ಇ.ಟಿ.ಎಂ ಕಳೆದು ಹೋಗಿರುವ ಮತ್ತು ಸದರಿ ಇ.ಟಿ.ಎಂ ಸಾರಿಗೆ ಆದಾಯ ಮೊತ್ತವನ್ನು ನಿರ್ವಾಹಕ/ಚಾಲಕ ಕಂ ನಿರ್ವಾಹಕರಿಂದ ಪಾವತಿಸಿಕೊಂಡಿರುವ ಬಗ್ಗೆ ಲೆಕ್ಕಪತ್ರ ಮೇಲ್ವಿಚಾರಕರ/ಅಧೀಕ್ಷಕರ ಮತ್ತು ಘಟಕ ವ್ಯವಸ್ಥಾಪಕರ ದೃಢೀಕೃತ ಪ್ರತಿ.
   iv. ದೊರಕಿರುವ ಇ.ಟಿ.ಎಂ ಸುಸ್ಥಿತಿಯಲ್ಲಿರುವ ಬಗ್ಗೆ ಲೆಕ್ಕಪತ್ರ ಮೇಲ್ವಿಚಾರಕರು/ಅಧೀಕ್ಷಕರು, ಗಣಕ ಮೇಲ್ವಿಚಾರಕರು/ವಿಭಾಗದ ಗಣಕ ಸಂಯೋಜಕರು ಮತ್ತು ಘಟಕ ವ್ಯವಸ್ಥಾಪಕರ ವರದಿ.
   v. ಇ.ಟಿ.ಎಂ ದೊರಕಿರುವ ಬಗ್ಗೆ ಮತ್ತು ವ್ಯತ್ಯಾಸದ ಮೊತ್ತ ಮರುಪಾವತಿಸುವ ಬಗ್ಗೆ ನಿರ್ವಾಹಕರು /ಚಾಲಕ ಕಂ ನಿರ್ವಾಹಕರು ನೀಡಿರುವ ಮನವಿ ಪ್ರತಿ.

. . . 2

5. ಈ ಪ್ರಕರಣವನ್ನು ಪ್ರಧಾನ ವ್ಯವಸ್ಥಾಪಕರು(ಸಂ)/ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ) ರವರು ಪರಿಶೀಲಿಸಿ ನಂತರ ಹಣವನ್ನು ಹಿಂತಿರುಗಿಸುವ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು ರವರ ಅಭಿಪ್ರಾಯವನ್ನು ಪಡೆದುಕೊಂಡು ಸಂಬಂಧಪಟ್ಟ ವಿಭಾಗೀಯ ನಿಯಂತ್ರಣಾಧಿಕಾರಿ ರವರಿಗೆ ಸೂಕ್ತ ಆದೇಶ ನೀಡುವುದು.
6. ಅಪಘಾತ ಸಂಭವಿಸಿದ ಸಂದರ್ಭದಲ್ಲಿ ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ನಿರ್ವಾಹಕರು/ಚಾಲಕ ಕಂ ನಿರ್ವಾಹಕರು ದುರದೃಷ್ಟವಶಾತ್ ಮೃತರಾದಲ್ಲಿ ಸದರಿ ಅಪಘಾತ ಸ್ಥಳ ಪರಿಶೀಲಿಸಿದ ಅಧಿಕಾರಿ/ಸಿಬ್ಬಂದಿ ಇ.ಟಿ.ಎಂ ಯಂತ್ರ, ಟಿಕೇಟು ಪುಸ್ತಕಗಳು ಹಾಗೂ ಸಾರಿಗೆ ಆದಾಯ ಸುರಕ್ಷಿತವಾಗಿರುವ ಬಗ್ಗೆ ಪರಿಶೀಲಿಸುವುದು. ಇವು ಕಳೆದುಹೋಗಿದ್ದ ಪಕ್ಷದಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಸೂಕ್ತ ದೂರು ದಾಖಲಿಸಿ ತಮ್ಮ ವರದಿಯೊಡನೆ ಸಂಬಂಧಪಟ್ಟ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಸಲ್ಲಿಸುವುದು.
7. ಸದರಿ ವರದಿಯನ್ನು ವಿಭಾಗೀಯ ನಿಯಂತ್ರಣಾಧಿಕಾರಿಗಳು ಕೂಲಂಕಷವಾಗಿ ಪರಿಶೀಲಿಸಿ ಇ.ಟಿ.ಎಂ ಯಂತ್ರ ಹಾಗೂ ಸಾರಿಗೆ ಆದಾಯ ಲಭ್ಯವಾಗದೆ ಇದ್ದ ಪಕ್ಷದಲ್ಲಿ ಸಾರಿಗೆ ಆದಾಯದ ಮೊತ್ತ/ಟಿಕೇಟ್ ಪುಸ್ತಕಗಳ ಮೊತ್ತ ಮತ್ತು ಇ.ಟಿ.ಎಂ ಯಂತ್ರದ ಮೊತ್ತಗಳನ್ನು ಕಾರ್ಯಾಚರಣೆ ನಷ್ಟವೆಂದು ಪರಿಗಣಿಸುವ ಸಲುವಾಗಿ ಮನ್ನಾ ಮಾಡಬೇಕಾದ ಮೊತ್ತ, ಈ ಕೆಳಕಂಡ ದಾಖಲಾತಿಗಳು, ಹಾಗೂ ಸ್ಪಷ್ಟ ಶಿಫಾರಸ್ಸಿನೊಂದಿಗೆ ವರದಿಯನ್ನು ಪ್ರಧಾನ ವ್ಯವಸ್ಥಾಪಕರು(ಸಂ)/ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ), ಕೇಂದ್ರ ಕಛೇರಿ ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸುವುದು.
   i. ನಿಗಮದ ವತಿಯಿಂದ ಸ್ಥಳ ಪರಿಶೀಲನೆ ನಡೆಸಿದ ಅಧಿಕಾರಿ/ಸಿಬ್ಬಂದಿಯ ವಿವರವಾದ ವರದಿ, ಟಿ.ಆರ್-18 ಮತ್ತು ಸದರಿ ವರದಿಯಲ್ಲಿ ಸಾರಿಗೆ ಆದಾಯ, ಇ.ಟಿ.ಎಂ ಯಂತ್ರ ಮತ್ತು ಟಿಕೇಟು ಪುಸ್ತಕಗಳು ಕಳೆದುಹೋಗಿರುವ ಬಗ್ಗೆ ಮಾಹಿತಿ ಮತ್ತು ಸದರಿ ಅಧಿಕಾರಿ/ಸಿಬ್ಬಂದಿಯು ಸಂಬಂಧಪಟ್ಟ ಪೊಲೀಸ್ ಠಾಣೆಗೆ ನೀಡಿರುವ ದೂರಿನ ಪ್ರತಿ.
   ii. ಪೊಲೀಸ್ ಠಾಣೆಯ ಅಪಘಾತದ ಪ್ರಥಮ ವರದಿ ಮತ್ತು ಪ್ರಥಮ ವರದಿಯಲ್ಲಿ ಇ.ಟಿ.ಎಂ, ಸಾರಿಗೆ ಆದಾಯ ಕಳೆದುಹೋಗಿರುವ ಬಗ್ಗೆ ನಮೂದಿಸಿರುವ ದಾಖಲಾತಿ.
8. ಈ ಪ್ರಕರಣವನ್ನು ಪ್ರಧಾನ ವ್ಯವಸ್ಥಾಪಕರು(ಸಂ)/ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ) ರವರು ಕೂಲಂಕಷವಾಗಿ ಪರಿಶೀಲಿಸಿ ಸದರಿ ಮೊತ್ತಗಳನ್ನು ಕಾರ್ಯಾಚರಣೆ ನಷ್ಟವೆಂದು ಪರಿಗಣಿಸಿ ಮನ್ನಾ ಮಾಡುವ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು ರವರ ಅಭಿಪ್ರಾಯ ಹಾಗೂ ನಿರ್ದೇಶಕರು(ಸಿ&ಪ) ರವರ ಅನುಮೋದನೆ ಪಡೆದು ಸಂಬಂಧಪಟ್ಟ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಸೂಕ್ತ ಆದೇಶ ನೀಡುವುದು.

ಮೇಲ್ಕಂಡ ಸೂಚನೆಗಳನ್ನು ಸಂಬಂಧಪಟ್ಟ ಎಲ್ಲಾ ಅಧಿಕಾರಿ/ಸಿಬ್ಬಂದಿಗಳ ಗಮನಕ್ಕೆ ತರುವುದು.

ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 546/2004 ರ ಕ್ರಮ ಸಂಖ್ಯೆ 4 ರಲ್ಲಿ ತಿಳಿಸಿರುವ ಅಂಶವನ್ನು ಹೊರತುಪಡಿಸಿ ಉಳಿದ ಎಲ್ಲಾ ಸೂಚನೆಗಳು ಜಾರಿಯಲ್ಲಿರುತ್ತವೆ. ಈ ಸುತ್ತೋಲೆಯ ಸೂಚನೆಗಳು ತಕ್ಷಣದಿಂದ ಜಾರಿಗೆ ಬರುತ್ತವೆ. ಸುತ್ತೋಲೆ ಸ್ವೀಕರಿಸಿದಕ್ಕೆ ಸ್ವೀಕೃತಿ ಮತ್ತು ಅನುಸರಣಾ ವರದಿ ಕಳುಹಿಸುವುದು.

ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು :
ವ್ಯವಸ್ಥಾಪಕ ನಿರ್ದೇಶಕರು, ಬೆಮಸಾಸಂ/ವಾಕರಸಾಸಂ/ಈಕರಸಾಸಂ ರವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾನಿ, ಕೇಂದ್ರ ಕಛೇರಿ ರವರ ಮಾಹಿತಿಗಾಗಿ.
ಮುಖ್ಯ ಸಂಚಾರ ವ್ಯವಸ್ಥಾಪಕರು ಬೆಮಸಾಸಂ/ವಾಕರಸಾಸಂ/ಈಕರಸಾಸಂ ರವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿಗಳು, ಕರಾರಸಾನಿರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು/ವಿಭಾಗೀಯ ಸಂಚಾಲನಾಧಿಕಾರಿಗಳು/ಘಟಕ ವ್ಯವಸ್ಥಾಪಕರು, ಕರಾರಸಾನಿ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
ಉಪಮುಖ್ಯ ಸಂಚಾರ ವ್ಯವಸ್ಥಾಪಕರು(ಕೇಂದ್ರ ತನಿಖಾ ದಳ) ಕ.ರಾ.ರ.ಸಾ.ನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
ಹಿರಿಯ/ಆಪ್ತ ಕಾರ್ಯದರ್ಶಿ, ಅಧ್ಯಕ್ಷರು/ಉಪಾಧ್ಯಕ್ಷರು/ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಭ:ಜಾ)/ನಿರ್ದೇಶಕರು(ಸಿ:ಪ)/ ಕರಾರಸಾನಿಗಮ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.